C.R.P.67

| Form No.4 (Civil) Deposition Sheets (R.P.No.57) |
|---|

**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಸ್ಪೆಷಲ್ ಸಿ ಸಂಖ್ಯೆ: 49/2020**

ಪ್ರಾಸಾ. **14** ಚಾಸಾ. **26**

| | | |
|---|---|---|
| ಸಾಕ್ಷಿದಾರರ ಹೆಸರು | : | ನರಸಿಂಹಮೂರ್ತಿ |
| ತಂದೆಯ ಹೆಸರು | : | ಲೇ. ಮುತ್ತಯ್ಯ |
| ವಯಸ್ಸು | : | 60 ವರ್ಷಗಳು |
| ಉದ್ಯೋಗ | : | ವ್ಯವಸಾಯ |
| ವಾಸ | : | ಪಚ್ಚಾರಲಹಳ್ಳಿ, ದೊಡ್ಡಬಳ್ಳಾಪುರ ತಾಲ್ಲೂಕು |

**ಪ್ರಮಾಣ ವಚನ ಬೋಧಿಸಿದ ದಿನಾಂಕ: 07.02.2026.**

**ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ**

ನಾನು ಕೂಲಿ ಕೆಲಸ ಮಾಡುತ್ತೇನೆ. ಗುಡ್ಡೆ ನರಸಿಂಹಸ್ವಾಮಿ ದೇವಸ್ಥಾನ ನಮ್ಮೂರಿನ ಸಮೀಪ ದೇವಸ್ಥಾನ. ನಾನು ಯಾವುದೇ ಜಾನುವಾರುಗಳನ್ನು ಸದರಿ ದೇವಸ್ಥಾನದ ಬಳಿ ಮೇಯಿಸಿರುವುದಿಲ್ಲ ಆದರೆ ಸದರಿ ದೇವಸ್ಥಾನದ ಬಳಿ ಇರುವ ಸರ್ವೆ ಸಂಖ್ಯೆ 147 ರಲ್ಲಿ 4 ಎಕರೆ ವಿಸ್ತೀರ್ಣದ ಜಮೀನು ನನ್ನ ಮಾಲೀಕತ್ವದ ಜಮೀನಾಗಿದ್ದು ನಾನು ಅಲ್ಲಿ ಕೃಷಿ ಮಾಡುತ್ತಿದ್ದೆನು. ಸದರಿ ಜಮೀನಿನಲ್ಲಿ 2019 ರಲ್ಲಿ ನಾನು ಕೊಳವೆ ಬಾವಿ ತೆಗೆಸಿದ್ದು 2020 ರಲ್ಲಿ ವಿದ್ಯುತ್ ಸಂಪರ್ಕವನ್ನು ಪಡೆದಿದ್ದೆ. ಸದರಿ ಜಮೀನಿನಲ್ಲಿ ಯಾವುದೇ ಅಹಿತಕರ ಘಟನೆ ನಡೆದಿಲ್ಲ. ಮರಿಯಣ್ಣ ಹೇಗೆ ತೀರಿಕೊಂಡ ಎಂಬುದಾಗಿ ನನಗೆ ಗೊತ್ತಿಲ್ಲ. ಸದರಿ ದೇವಸ್ಥಾನದ ಸ್ಥಳದ ಸಮೀಪ ಬೇರೆ ಇತರ ವ್ಯಕ್ತಿಗಳು ಕುರಿ ಜಾನುವಾರುಗಳನ್ನು ಮೇಯಿಸುತ್ತಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಆರೋಪಿಗಳು ಏನು

ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನಗೆ ಮೃತ ವ್ಯಕ್ತಿ ಗೊತ್ತಿಲ್ಲ. ನಾನು ಆರೋಪಿಗಳ ವಿರುದ್ಧ ಯಾವುದೇ ಹೇಳಿಕೆಯನ್ನು ಪೋಲೀಸರಿಗೆ ನೀಡಿಲ್ಲ.

**(**ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕೆಂದು ಕೋರಿದ್ದು**,** ಕೋರಿಕೆ ಸಮರ್ಪಕವಾಗಿದ್ದು ಪುರಸ್ಕರಿಸಲಾಗಿದೆ ಮತ್ತು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲಾಗಿದೆ**.)**

ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ

"ನಾನು ಈ ಜಮೀನಿನಲ್ಲಿ ......................ಕ್ರಮ ಕೈಗೊಳ್ಳಬೇಕೆಂದು ಕೋರುತ್ತೇನೆ." ಎಂಬ ಹೇಳಿಕೆಯನ್ನು ಈಗ ನನಗೆ ಓದಿ ಹೇಳಿದಂತೆ ನಾನು ಆರೋಪಿಗಳ ವಿರುದ್ಧ ನುಡಿದಿಲ್ಲ. ನನಗೆ ಓದಿ ಹೇಳಿದ ಮತ್ತು ನಾನು ಅಲ್ಲಗಳೆದ ಹೇಳಿಕೆಯನ್ನು ಈಗ ನಿ.ಪಿ**-36** ಎಂದು ಗುರುತಿಸಲಾಯಿತು. ನನಗೆ ಆರೋಪಿಗಳ ಬಗ್ಗೆ ಮಾಹಿತಿ ಇದ್ದರೂ ಹಾಗೂ ನಿ.ಪಿ-36 ರಂತೆ ಸಂಗತಿಗಳು ಗೊತ್ತಿದ್ದರೂ ನಾನು ಆರೋಪಿತರಿಗೆ ಸಹಾಯ ಮಾಡುವ ಸಲುವಾಗಿ ಅಸತ್ಯ ನುಡಿದೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ

ಆರೋಪಿತರ ಪರ ವಕೀಲರು ಹಾಜರಿದ್ದು ತಮ್ಮದು ಪಾಟೀ ಸವಾಲು ಏನೂ ಇಲ್ಲ ಎಂದು ಹೇಳುತ್ತಿದ್ದಾರೆ, ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**(**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು**)**

ಓ. ಹೇ. ಕೇ. ಸ. ಒ.

(ಸಿದ್ದಲಿಂಗ ಪ್ರಭು)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.